
ಕಲ್ಲುಸಕ್ಕರೆ





ಸಿದ್ಧಲಿಂಗ ಪಟ್ಟಣಶೆಟ್ಟಿ

# ಸುಮತೀಂದ್ರ ನಾಡಿಗ

## ಒಡನಾಟದ ಕೆಲವು ನೆನಪುಗಳು

ಸುಮತೀಂದ್ರ ನಾಡಿಗ (4.5.1935 – 7.8.2018) ಆಧುನಿಕ ಕನ್ನಡ ಕಾವ್ಯದ ಪ್ರಮುಖ ಕವಿಗಳಲ್ಲೊಬ್ಬರು. ನಾಡಿಗರ ಪ್ರತಿಭೆ ಹಾಗೂ ವ್ಯಕ್ತಿತ್ವದ ಹಲವು ಆಯಾಮಗಳನ್ನು ಪರಿಚಯಿಸುವ ಇಲ್ಲಿನ ಆರ್ದ್ರ ಟಿಪ್ಪಣಿಗಳು, ಕವಿಗಳಿಬ್ಬರ ಒಡನಾಟದ ಸುಂದರ ನೆನಪುಗಳ ಜೊತೆಗೆ ಕನ್ನಡ ಸಾಹಿತ್ಯಲೋಕದ ಕಾಲಘಟ್ಟವೊಂದನ್ನು ನೆನಪಿಸುವ ಅಪೂರ್ವ ಸ್ಮೃತಿಚಿತ್ರಗಳೂ ಆಗಿವೆ.

ಸುಮತೀಂದ್ರ ನಾಡಿಗನನ್ನು ಅಸೂಯೆ, ಅನಾಸಕ್ತಿಯಿಂದ ದೂರವಿಟ್ಟವರೇ ಬಹಳ ಜನ. ತನ್ನ ಬಗ್ಗೆ ಕವಿಗಳು, ವಿಮರ್ಶಕರು, ಸಾಹಿತ್ಯಾಭಿಮಾನಿಗಳು ತೋರಿದ ಅಲಕ್ಷ್ಯಕ್ಕೆ ಸುಮತೀಂದ್ರ ನಿರ್ಲಕ್ಷ್ಯದ ಮದ್ದು ಉಣಿಸುತ್ತ ಸಮಾಧಾನಿಯಾಗಿದ್ದ, ನಿರ್ಲಿಪ್ತನಾಗಿದ್ದ; ಹಾಗೆ ಹೇಳುತ್ತಲೂ ಇದ್ದ. ತನ್ನ ಸಾಹಿತ್ಯಪ್ರೇಮ ಮತ್ತು ಸಹಜ ನಿಸ್ವಾರ್ಥದ ಸ್ವಭಾವದಿಂದಾಗಿ ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕಗಳನ್ನು ಬೆಸೆಯುವ, ಪರಿಚಯಿಸುವ, ಕೂಡಿಸುವ ಅಪರೂಪದ ವ್ಯಕ್ತಿತ್ವ ಹೊಂದಿದ್ದ. ನಾಡಿಗ ನನಗಿಂತ ನಾಲ್ಕೂವರೆ ವರ್ಷ ಹಿರಿಯ. ಆದರೆ, ಈ ಅಂತರ ನಮ್ಮನ್ನು ಎಂದೂ ಬೇರ್ಪಡಿಸಲಾಗದಷ್ಟು ನಾವು ಹತ್ತಿರದವರಾಗಿದ್ದೆವು. ನಮ್ಮಿಬ್ಬರ ಸ್ನೇಹ, ಆಪ್ತತೆ, ಬಾಂಧವ್ಯ 1964ರಿಂದ 2018ರಲ್ಲಿ ಅವನು ನಿರ್ಗಮಿಸುವವರೆಗೂ ಸಾಗಿ ಬಂದಿತ್ತು. ಆರಂಭದ ದಿನಗಳಿಂದಲೇ ನಮ್ಮ ನಡುವಿನ ಬಹುವಚನವನ್ನು ಬದಲಿಸಿ, ಏಕವಚನದ ಆಪ್ತತೆಗೆ ತಿರುಗಿಸಿದ ನಾಡಿಗನ ಅಕ್ಕರೆ ಕೂಡ ಅಪರೂಪದ್ದು.

***

1964ರ ಮೇ ತಿಂಗಳಲ್ಲಿ ನನ್ನ ಮೊದಲ ಕವನಸಂಗ್ರಹ 'ನೀನಾ' ಪ್ರಕಟವಾಗಿತ್ತು. ಅದಕ್ಕೆ ಕೆ.ಎಸ್.ನ. ಮುನ್ನುಡಿ ಬರೆದಿದ್ದರು. ಕೆಲವು ಪತ್ರಿಕೆಗಳಿಗೆ ವಿಮರ್ಶೆ ಕೋರಿ ಪುಸ್ತಕ ಕಳಿಸಿದ್ದೆ.